Rotary

ರೋಟರಿ **ಐಸಿರಿ** ಪರ್ಕಳ

ವಲಯ-4, ರೋ. ಜಿಲ್ಲೆ-3182

ನಮ್ಮ ನಡೆ... ಕೃಷಿಯ ಕಡೆ...

UNITE FOR GOOD

ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 40

ದಿನಾಂಕ: 07.04.2026



Rtn. Francesco Arezzo
R.I. President



Rtn. K. Palaksha
District Governor



Rtn. Anil Kumar
President



Rtn. Krishnappa
Secretary

## ರೊ. ಹೇಮಂತ್ ಯು. ಕಾಂತ್ ನೇತೃತ್ವದಲ್ಲಿ PELS ಮತ್ತು SELS ನಲ್ಲಿ ಭಾಗವಹಿಸಿದ ಅಧ್ಯಕ್ಷ, ಕಾರ್ಯದರ್ಶಿಯರು



ರೋಟರಿ ಅಂತಾರಾಷ್ಟ್ರೀಯ ಜಿಲ್ಲೆ 3182 ರ ಎಲ್ಲಾ 86 ಕ್ಲಬ್ ಗಳ ನಿಯೋಜಿತ ಅಧ್ಯಕ್ಷರು ಮತ್ತು ನಿಯೋಜಿತ ಕಾರ್ಯದರ್ಶಿಗಳಿಗೆ ತಮ್ಮ ಹುದ್ದೆಯ ಹೊಣೆಗಾರಿಕೆ ಮತ್ತು ನಿರ್ವಹಣೆಯನ್ನು ತಿಳಿಸಿಕೊಡುವ "ಸಶಕ್ತ 2026" ಎರಡು ದಿನದ ಕಲಿಕಾ ಶಿಬಿರವು ನಡೆಯಿತು. ಏಪ್ರಿಲ್ 4 ಮತ್ತು 5 ರಂದು ಮೈಸೂರಿನ ಲೀ ರುಚಿ ದ ಪ್ರಿನ್ಸ್ ಹೋಟೆಲಿನಲ್ಲಿ ನಡೆದ ಈ ಸನಿವಾಸ ಕಾರ್ಯಕ್ರಮದಲ್ಲಿ, ನಿಯೋಜಿತ ಸಹಾಯಕ ರಾಜ್ಯಪಾಲ (Assistant Governor) ರೊ. ಹೇಮಂತ್ ಯು. ಕಾಂತ್ ಅವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ವಲಯ 4ರ ತಂಡವು ಅತ್ಯಂತ ಲವಲವಿಕೆಯಿಂದ ಭಾಗವಹಿಸಿತು.

ರೋಟರಿಯ Past District Governor ಗಳ ಸಹಿತ ವಿವಿಧ ಉನ್ನತ ಶ್ರೇಣಿಯ ಪದಾಧಿಕಾರಿಗಳು, ಅತಿಥೇಯರಾದ ರೋಟರಿ ಕ್ಲಬ್ ಉಡುಪಿಯ ಆಯೋಜನಾ ಸಮಿತಿಯ ಸದಸ್ಯರೂ ಸೇರಿದಂತೆ ಸುಮಾರು ಇನ್ನೂರು ಸದಸ್ಯರು ಈ ಶಿಬಿರದಲ್ಲಿ ಪಾಲ್ಗೊಂಡರು. ಸುಮಾರು ಹತ್ತು ವಿವಿಧ ವಿಷಯಗಳ ಮೇಲೆ ನಡೆದ ಕಲಿಕಾ ಕಲಾಪಗಳಿಂದ ರೋಟರಿ ಐಸಿರಿ ಪರ್ಕಳದ ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಮತ್ತು ನಿಯೋಜಿತ ಕಾರ್ಯದರ್ಶಿ ರೊ. ರಾಜೇಶ್ ಡಿ. ಶೆಣೈ ಬಹಳಷ್ಟು ವಿಷಯಜ್ಞಾನ ಸಂಪಾದಿಸಿದರು. Pre PELS & Pre SELS ಮಾರ್ಚ್ 22ರಂದು ಉಡುಪಿಯಲ್ಲಿ ನಡೆದಿತ್ತು.



Rtn. Anil Kumar
President

Rtn. Krishnappa
Secretary

"ಇದು ಭಾಗ್ಯ... ಇದು ಭಾಗ್ಯ... ಇದು ಭಾಗ್ಯವಯ್ಯಾ..." ಮಾತಿನಂತೆ ನಾನು ರೋಟರಿ ಐಸಿರಿಯ ಸದಸ್ಯನಾಗಿರುವುದು ನನ್ನ ಭಾಗ್ಯ. ನನಗೆ ರಾಜೇಶ್ ಡಿ. ಶೆಣೈ ಅವರ ಜೊತೆ ಕೆಲಸ ಮಾಡಲು ಅವಕಾಶ ಸಿಕ್ಕಿರುವುದು ನನ್ನ ಭಾಗ್ಯ. 2026-27ಕ್ಕೆ ಅಸಿಸ್ಟೆಂಟ್ ಗವರ್ನರ್ ಆಗಿ ರೊ. ಹೇಮಂತ್ ಯು. ಕಾಂತ್ ಆಯ್ಕೆ ಆಗಿರುವುದು ನಮ್ಮ ಭಾಗ್ಯ...

ಆತ್ಮೀಯರೇ, ಜೀವನದಲ್ಲಿ ಯೋಗ ಮತ್ತು ಯೋಗ್ಯತೆ ಪಡೆಯಲು ಮೊತ್ತ ಮೊದಲ ಸಚ್ಛ ಜ್ಞಾನ ಸಂಪಾದನೆ. ಈ ದೃಷ್ಟಿಯಿಂದ

ನಮ್ಮ ರೋಟರಿ ಐಸಿರಿಯ ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ರವರು ಹಿಂದಿನ ಸಂಚಿಕೆಯಲ್ಲಿ ಭಾಗ್ಯಗಳ ಬಗ್ಗೆ ಮಾತನಾಡಿದ್ದಾರೆ.

Junior Chamber International (JCI) ರಾಷ್ಟ್ರಾಧ್ಯಕ್ಷರ ಬಳಿಕದ ಅತ್ಯಂತ ಪ್ರತಿಷ್ಠಿತ ಹುದ್ದೆಯಾದ Executive Vice President ಅಂದರೆ, ರಾಷ್ಟ್ರೀಯ ಉಪಾಧ್ಯಕ್ಷರಾಗಿ ಇವರು ಹಲವು ರಾಜ್ಯಗಳ JCI ಘಟಕಗಳಿಗೂ ಮಾರ್ಗದರ್ಶನ ನೀಡಿ ಅಪಾರ ಅನುಭವ ಗಳಿಸಿರುತ್ತಾರೆ. ಇಂತಹ ಪ್ರತಿಷ್ಠಿತ ಹುದ್ದೆಯನ್ನು ಸಮರ್ಥವಾಗಿ ನಿರ್ವಹಿಸಿರುವ ರೊ. ಸಂದೀಪ್ ಕುಮಾರ್ ರೋಟರಿ ಐಸಿರಿಯಲ್ಲಿ ನಮ್ಮ ಜೊತೆಗಿರುವುದು ಹೆಮ್ಮೆಯ ವಿಚಾರ.

ಅವರ ಅಧ್ಯಕ್ಷತೆಯ ಅವಧಿಯಲ್ಲಿ, ಅವರೊಂದಿಗೆ ಕಾರ್ಯದರ್ಶಿಯಾಗಿ ನಿರ್ವಹಿಸುವ ಅದೃಷ್ಟ ನನ್ನದಾದುದಕ್ಕೆ ತುಂಬಾ ಖುಷಿಪಡುತ್ತಿದ್ದೇನೆ. ಅವರ ವಿನಮ್ರತೆಗೆ ಶಿರಬಾಗಿ ವಂದಿಸುತ್ತೇನೆ ಮತ್ತು ಅವರ ಹಾಗೂ ಐಸಿರಿಯ ಸದಸ್ಯರ ನಿರೀಕ್ಷೆಯ ಮಟ್ಟಕ್ಕೇರುವ, ಒಂದು ವರ್ಷ ಸುಲಲಿತವಾಗಿ ಕಾರ್ಯನಿರ್ವಹಿಸುವ ಶಕ್ತಿ – ಸಾಮರ್ಥ್ಯ – ಉತ್ಸಾಹನೀಡೆಂದು ಶ್ರೀದೇವರಲ್ಲಿ ಪ್ರಾರ್ಥಿಸುವೆ. ಧನ್ಯವಾದಗಳು.

**ರೊ. ರಾಜೇಶ್ ಡಿ. ಶೆಣೈ**

## PELS ಮತ್ತು SELS ಕಾರ್ಯಕ್ರಮದಲ್ಲಿ ರೋಟರಿ ಗಣ್ಯರಿಂದ ಕೇಳಿದ ಕೆಲವೊಂದು ವಾಕ್ಯಗಳು......



ನಿಮ್ಮ ಅವಧಿಯನ್ನು ಯಶಸ್ವಿಯಾಗಿ ನಿಭಾಯಿಸಲು ಬೇಕಾದುದು ಸ್ವಲ್ಪ ರೋಟರಿ ಜ್ಞಾನ, ಸ್ವಲ್ಪ ನಾಯಕತ್ವ ಕೌಶಲ್ಯ ಮತ್ತು ಬಹುವಾದ ಕಾಮನ್ ಸೆನ್ಸ್ ! ಟೊಮೆಟೊ ಒಂದು ಹಣ್ಣು ಎನ್ನುವುದು ಜ್ಞಾನ, ಅದನ್ನು ಹೇಗೆ ಕಟ್ ಮಾಡಬೇಕೆನ್ನುವುದು ಕೌಶಲ, ಆದರೆ ಅದನ್ನು ಫ್ರೂಟ್ ಸಲಾಡ್ ಗೆ ಹಾಕಬಾರದು ಎನ್ನುವುದು ಕಾಮನ್ ಸೆನ್ಸ್ !

**- ರೊ. ಅಭಿನಂದನ್ ಶೆಟ್ಟಿ**



True community impact is achieved by generously investing our **time**, **talent**, and **treasure** into causes we care about, rather than just offering passive support. While contributing these resources is essential, creating a harmonious society also requires the **tolerance** to accept diverse perspectives and work collaboratively with others.

**- Rtn. H.R. Keshav**



सबसे सुन
मन से सोच
दिल से कर
ಎಲ್ಲರದ್ದೂ ಆಲಿಸು
ಮನಸಾರೆ ಯೋಚಿಸು
ಹೃದಯಪೂರ್ವಕವಾಗಿ ಕಾರ್ಯನಿರ್ವಹಿಸು

**- Rtn. Nagendra**



ಉತ್ತಮವಾದ - ಉತ್ಸಾಹಿ ತಂಡ ದೊರೆತಿದೆ.
ಪ್ರತಿಯೊಂದು ಕಾರ್ಯಕ್ರಮದಲ್ಲಿಯೂ
ಒಗ್ಗಟ್ಟಿನಿಂದ ಪಾಲ್ಗೊಂಡು,
ರೋಟರಿಯನ್ನು ಆನಂದಿಸೋಣ


**– Rtn. Hemanth U kanth**

## ಡಿಸ್ಟ್ರಿಕ್ಟ್ ಎಸ್ಸೆಂಬ್ಲಿ

Pre PELS ಮತ್ತು Pre SELS ಮೊದಲ ಹಂತದ ಕಾರ್ಯಕ್ರಮವಾದರೆ PELS ಮತ್ತು SELS ಎರಡನೇ ಹಂತದ ಕಾರ್ಯಕ್ರಮವಾಗಿರುತ್ತದೆ. ಈ ಎರಡು ಹಂತಗಳಲ್ಲಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಗೆ ತಂತಮ್ಮ ಹುದ್ದೆ ನಿರ್ವಹಿಸಲು ಬೇಕಾದ ಮಾಹಿತಿ ನೀಡುತ್ತಾರೆ. ಈ ಶ್ರೇಣಿಯ ಮುಂದಿನ ಮತ್ತು ಕೊನೆಯ ಹಂತದ ಕಲಿಕಾ ಕಾರ್ಯಕ್ರಮ ಬಹುಮುಖ್ಯವಾದ "ಡಿಸ್ಟ್ರಿಕ್ಟ್ ಎಸ್ಸೆಂಬ್ಲಿ".

ಈ ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಗಳಲ್ಲಿ ಬೋರ್ಡ್ ಮೆಂಬರ್ ಆಗಿ ಜವಾಬ್ದಾರಿಯುತ ಹುದ್ದೆ ಹೊಂದಿರುವ ಎಲ್ಲರೂ ಭಾಗವಹಿಸಬೇಕಾಗುತ್ತದೆ. ಈ "ಡಿಸ್ಟ್ರಿಕ್ಟ್ ಎಸ್ಸೆಂಬ್ಲಿ" ಮೇ ತಿಂಗಳ 16 ಮತ್ತು 17ರಂದು ರೋಟರಿ ಕ್ಲಬ್ ಕೋಟೇಶ್ವರದ ಆತಿಥ್ಯದಲ್ಲಿ ಕುಂದಾಪುರದ ಸಹನಾ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ.

ಈ ಕಾರ್ಯಕ್ರಮಕ್ಕೆ ಈಗಾಗಲೇ ನಿಯೋಜಿತ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ನೋಂದಾವಣೆ ಮಾಡಿದ್ದು ಉಳಿದ ಸದಸ್ಯರು ಆದಷ್ಟು ಶೀಘ್ರ ತಮ್ಮ ಹೆಸರನ್ನೂ ನೋಂದಾಯಿಸಲಿದ್ದಾರೆ.



## ಬೌದ್ಧಿಕ ಸಿರಿ *ಸ್ವಪ್ರೇರಣೆ ಜೊತೆಗೇ ಮೋಟಿವೇಷನ್!*

ನನಗೆ ಮೋಟಿವೇಷನ್ ಇಲ್ಲ, ನನಗೆ ಮೋಟಿವೇಟ್ ಮಾಡುವವರು ಬೇಕು ಎಂದೆಲ್ಲಾ ಕೆಲವೊಮ್ಮೆ ಅನಿಸುವುದು ಸಹಜ – ಸಾಮಾನ್ಯ.

ನಿಜಕ್ಕಾದರೆ, ಸ್ವತಃ ತಾನೇ ತೀರ್ಮಾನಿಸುವವರೆಗೆ ಯಾರನ್ನೂ ಯಾರೂ ಹುರಿದುಂಬಿಸಲು ಸಾಧ್ಯವಿಲ್ಲ, ಅದಕ್ಕೇ ಸ್ವಪ್ರರಣೆ ಬಹಳಷ್ಟು ಮುಖ್ಯ ಮತ್ತು ಪರಿಣಾಮಕಾರಿಯಾದುದು.

ಹೊರಗಿನಿಂದ ಬರುವ ಪ್ರೋತ್ಸಾಹ ತಾತ್ಕಾಲಿಕ ವಾಗಿರಬಹುದು, ಆದರೆ ಒಳಗಿನಿಂದ ಹುಟ್ಟುವ ಪ್ರೇರಣೆ ದೀರ್ಘಕಾಲದ ಶಕ್ತಿ ನೀಡುತ್ತದೆ. ಇಂತಹ ಕಿಂಚಿತ್ ಆದರೂ ಇರುವ ಸ್ವಪ್ರೇರಣೆಯೊಂದಿಗೆ, ಸೂಕ್ತ ಬಾಹ್ಯ ಪ್ರೇರಣೆಯೂ ಜತೆಗೂಡಿದಾಗ ಜೀವನದ ದಿಕ್ಕೇ ಬದಲಾಗಬಲ್ಲುದು.

ಸ್ವಲ್ಪವಾದರೂ ಸ್ವಪ್ರೇರಣೆ ಇಲ್ಲದೇ ಇದ್ದರೆ, ಬಾಹ್ಯ ಪ್ರೇರಣೆಯು ಒತ್ತಡ ಎಂದೆನ್ನಿಸಬಹುದು. ಹಸ್ತಕ್ಷೇಪ ಎನ್ನಿಸಬಹುದು. ಅಂತಹ ಬಾಹ್ಯ ಒತ್ತಡದಿಂದ ನಾವು ಕೆಲಸವೇನೋ ಮಾಡಬಹುದು, ಆದರೆ ಅದು ಹೆಚ್ಚು ಕಾಲ ಉಳಿಯುವುದಿಲ್ಲ.

ಉದಾಹರಣೆಗೆ ಮೊಟ್ಟೆ, ಅದು ತನ್ನೊಳಗಿನ ಒತ್ತಡದಿಂದ ಒಡೆದರೆ ಹೊಸ ಜೀವ ಹುಟ್ಟುತ್ತದೆ, ಬಾಹ್ಯ ಒತ್ತಡದಿಂದ ಒಡೆದರೆ ಅದು ಅಂತ್ಯವಾಗುತ್ತದೆ. ಅದೇ ರೀತಿ, ನಮ್ಮ ಜೀವನದಲ್ಲೂ ಒಳಗಿನಿಂದ ಬರುವ ಪ್ರೇರಣೆ ನಮ್ಮನ್ನು ಬೆಳವಣಿಗೆಯತ್ತ ಕರೆದೊಯ್ಯುತ್ತದೆ.

ಸ್ವಯಂಪ್ರೇರಣೆ ಹೊಂದಿರುವವರು ಸವಾಲು ಗಳನ್ನು ಅವಕಾಶಗಳಾಗಿ ನೋಡುತ್ತಾರೆ. ಅವರು ವಿಫಲತೆಯನ್ನು ಹೆದರದೆ, ಅದನ್ನು ಪಾಠವಾಗಿ ಪರಿಗಣಿಸುತ್ತಾರೆ. ನಿಮ್ಮ ಗುರಿಗಳು ನಿಮ್ಮದೇ ಆಗಿರಬೇಕು; ಆಗ ನೀವು ಅದಕ್ಕಾಗಿ ಶ್ರಮಿಸಲು ಸಿದ್ಧರಾಗುತ್ತೀರಿ.

ಆದ್ದರಿಂದ, ನಿಮ್ಮೊಳಗಿನ ಶಕ್ತಿಯನ್ನು ಅರಿತುಕೊಳ್ಳಿ. ಹೊರಗಿನ ಪ್ರೇರಣೆಗೆ ಮಾತ್ರ ಅವಲಂಬಿಸದೇ, ನಿಮ್ಮೊಳಗೆ ಉರಿಯುವ ಚಿಗುರನ್ನು ಬೆಳಗಿಸಿ. ಆತ್ಮಪ್ರೇರಣೆಯೇ ನಿಜವಾದ ಯಶಸ್ಸಿನ ಗುಟ್ಟು.

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ಮಾರ್ಚ್ 31ರ ಸಭೆಯ ಛಾಯಾಚಿತ್ರಗಳು











ಬ್ರಹ್ಮಶ್ರೀ ನಾರಾಯಣಗುರು ಸೇವಾ ಸಂಘ (ರಿ.) ಪರ್ಕಳದ ಅಧ್ಯಕ್ಷರಾದ, ರೊ. ಅನಿಲ್ ಕುಮಾರ್ ನೇತೃತ್ವದಲ್ಲಿ ಏಪ್ರಿಲ್ 4 ಮತ್ತು 5ರಂದು ನಡೆದ ನೂತನ ಬ್ರಹ್ಮಶ್ರೀ ನಾರಾಯಣಗುರು ಆಡಿಟೋರಿಯಂನ ಉದ್ಘಾಟನಾ ಸಮಾರಂಭದ ಯಶಸ್ಸಿಗೆ ಅಭಿನಂದನೆಗಳು. ರೊ. ಅನಿಲ್ ಕುಮಾರ್ ರೋಟರಿ ಐಸಿರಿ ಅಧ್ಯಕ್ಷರಾಗಿರುವ ಅವಧಿಯಲ್ಲೇ ಈ ಕಾರ್ಯಕ್ರಮವೂ ನಡೆದುದು ಅವಿಸ್ಮರಣೀಯ.



## ಕಾರ್ಯದರ್ಶಿಯವರ ವರದಿ



ರೋಟರಿ ಐಸಿರಿಯ 37ನೇ ವಾರದ ಸಭೆ 31/3/2026 ರಂದು RCC ಕಾರ್ಯಾಲಯದಲ್ಲಿ ನಡೆಯಿತು. ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಅವರು ಪ್ರಾರ್ಥನೆ ನಡೆಸಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ ನಿಕಟ ಪೂರ್ವ ಅಧ್ಯಕ್ಷ ರೊ. ಸುನಿಲ್ ಕುಮಾರ್ ಅವರು ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ವಾರದ ವರದಿಯನ್ನು ಮಂಡಿಸಿದರು.

ವಾರದ ಬುಲೆಟಿನ್ ಐಶ್ವರ್ಯ ವನ್ನು ರೊ. ಕೃಷ್ಣಪ್ಪ ಅವರು ಬಿಡುಗಡೆ ಗೊಳಿಸಿದರು. ಸಂಪಾದಕರಾದ ರೊ. ರಾಜೇಶ್ ಡಿ. ಶೆಣೈ ಸಹಕರಿಸಿದರು. ರೊ. ಕೃಷ್ಣಪ್ಪ ಅವರು ರೊ. ರಾಜೇಶ್ ಡಿ. ಶೆಣೈ ಅವರ ನಿರಂತರ ಶ್ರಮವನ್ನು ಪ್ರಶಂಸಿಸಿ ಗುರುತಿಸಿದರು. ಅಲ್ಲದೆ ಏಪ್ರಿಲ್ ತಿಂಗಳಲ್ಲಿ ಬೋರ್ಡ್ ಮೀಟಿಂಗ್, joint ಬೋರ್ಡ್ ಮೀಟಿಂಗ್ ಹಾಗೂ ತಿಂಗಳ ಕಾರ್ಯಕ್ರಮವನ್ನು ಅಧ್ಯಕ್ಷರ ಉಪಸ್ಥಿತಿಯಲ್ಲಿ ನಡೆಸುವುದಾಗಿ ತಿಳಿಸಿದರು.

ರೊ. ಎ. ಗಣೇಶ್ ಅವರು ಏಪ್ರಿಲ್ 4 ಮತ್ತು 5 ರಂದು ನಡೆಯಲಿರುವ ಅಧ್ಯಕ್ಷ ಕಾರ್ಯದರ್ಶಿಗಳ ಜಿಲ್ಲಾ ತರಬೇತಿ ಕಾರ್ಯಕ್ರಮ PELS and SELS ಬಗ್ಗೆ ಮಾಹಿತಿ ನೀಡಿ ಮುಂದಿನ ಅಧ್ಯಕ್ಷ ಕಾರ್ಯದರ್ಶಿಗಳಿಗೆ ಶುಭ ಹಾರೈಸಿದರು

ರೊ. ರಾಜೇಶ್ ಡಿ. ಶೆಣೈ ಸದಸ್ಯರ ಭಾಗವಹಿಸುವಿಕೆ ಹೆಚ್ಚಾಗಲು ಚಾರ್ಟರ್ ಸದಸ್ಯರು ಯೋಜನೆ ರೂಪಿಸಬೇಕು ಎಂದರು. ಜೊತೆಗೆ ಐಶ್ವರ್ಯ ಸಂಚಿಕೆಯ ಯಶಸ್ಸಿಗೆ ಎಲ್ಲರ ಪ್ರೋತ್ಸಾಹವೇ ಕಾರಣ ಎಂದು ಹೇಳಿದರು

ರೊ. ಸ್ಮಿತಾ ಜಿ. ಕಾಮತ್ ಅವರು ಪ್ರಸ್ತುತ ಕ್ಲಬ್ ನ ಪರಿಸ್ಥಿತಿ ಮತ್ತು ಕಾರಣಗಳನ್ನು ಅವಲೋಕಿಸಿದರು. Club ನ ಕಾರ್ಯಚಟುವಟಿಕೆ ಮತ್ತು ಬೆಳವಣಿಗೆಗಾಗಿ ಒಂದು ಟೀಮ್ ಹಾಗೂ ಸದೃಢ club ನ ಮೂಲ ಅಗತ್ಯಗಳನ್ನು ಕ್ರೋಢೀಕರಿಸಲು ಒಂದು ಟೀಮ್ ತಯಾರಿಸಿ ಎಂದು ಮುಂದಿನ ಸಾಲಿನ ಪದಾಧಿಕಾರಿಗಳಿಗೆ ಸೂಚಿಸಿದರು.

ರೊ. ಸಂದೀಪ್ ಕುಮಾರ್ ತಮ್ಮ ಆಂಧ್ರಪ್ರದೇಶದ ಪ್ರವಾಸದ ಅನುಭವಗಳನ್ನು ಹಂಚಿಕೊಂಡು ಅಲ್ಲಿನ ಅಹೋಬಿಲ ನರಸಿಂಹ ದೇವಸ್ಥಾನದ ವಿಶೇಷತೆಗಳನ್ನು ತಿಳಿಸಿದರು

ಅಧ್ಯಕ್ಷತೆ ವಹಿಸಿದ್ದ ರೊ. ಸುನಿಲ್ ಕುಮಾರ್ ಅವರು ಸರಕಾರದ ಜನಗಣತಿ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು. ಅವರು ಜನಗಣತಿ ನಡೆಸುವ ಕರ್ಮಚಾರಿಗಳಿಗೆ ಸರಕಾರದಿಂದ ತರಬೇತುದಾರರಾಗಿ ನಿಯೋಜಿತ ರಾಗಿರುವುದು ಹೆಮ್ಮೆಯ ವಿಷಯ.

ಅದೃಷ್ಟಶಾಲಿ ರೋಟರಿಯನ್ ಆಯ್ಕೆಯನ್ನು ರೊ. ಸುನಿಲ್ ಕುಮಾರ್ ನಡೆಸಿದರು. ರೊ. ಕೃಷ್ಣಪ್ಪ ಅವರು ಅದೃಷ್ಟಶಾಲಿ ವ್ಯಕ್ತಿಯಾಗಿ ಆಯ್ಕೆಯಾದರು.

ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ಧನ್ಯವಾದ ಸಮರ್ಪಿಸಿದರು

ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 39ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ ಸಾಪ್ತಾಹಿಕ "ಐಶ್ವರ್ಯ"ದ ಮೂವತ್ತೊಂಭತ್ತನೇ ಇ–ಸಂಚಿಕೆಯನ್ನು, ರೊ. ಕೃಷ್ಣಪ್ಪರವರು 31/03/26ರ ವಾರದ ಸಭೆಯಲ್ಲಿ ಬಿಡುಗಡೆಗೊಳಿಸಿದರು.





ಮಾರ್ಚ್ 23ರಂದು ವೈವಾಹಿಕ ಜೀವನದ ವಾರ್ಷಿಕೋತ್ಸವಕ್ಕಾಗಿ ರೊ. ಕೃಷ್ಣಪ್ಪ ಅವರನ್ನು ಸಭಾಧ್ಯಕ್ಷ ರೊ. ಸುನಿಲ್ ಕುಮಾರ್ ಗುರುತಿಸಿದರು. ಮತ್ತು ವಾರದ ಸಭೆಯ ಅದೃಷ್ಟಶಾಲಿ ರೋಟರಿಯನ್ ಚೀಟಿ ಎತ್ತಿದಾಗಲೂ ರೊ. ಕೃಷ್ಣಪ್ಪ ಅವರೇ ಆಯ್ಕೆಯಾಗಿ ಬಹುಮಾನ ಸ್ವೀಕರಿಸಿದರು.